# ತುಮಕೂರು ವಿಶ್ವವಿದ್ಯಾನಿಲಯ
# ರಾಷ್ಟ್ರೀಯ ಸೇವಾ ಯೋಜನೆ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು–572 103**

---

## ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರ

***ದಿನಾಂಕ 6ನೇ ಆಗಸ್ಟ್ 2018,*** ***ಡಾ.ಪಿ.ಸದಾನಂದಮಯ್ಯ ಕಟ್ಟಡ***

**ಡಾ.ಲೋಕೇಶ ಎಂ.ಯು**

ಕಾರ್ಯಕ್ರಮಸಂಯೋಜನಾಧಿಕಾರಿಗಳು

ರಾಷ್ಟ್ರೀಯ ಸೇವಾ ಯೋಜನೆ

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

# ತುಮಕೂರು ವಿಶ್ವವಿದ್ಯಾನಿಲಯ
## ರಾಷ್ಟ್ರೀಯ ಸೇವಾ ಯೋಜನೆ
ವಿಶ್ವವಿದ್ಯಾನಿಲಯ ಆವರಣ, ಬಿ.ಎಚ್. ರಸ್ತೆ, ತುಮಕೂರು–572 103

---

## ಕಾರ್ಯಕ್ರಮದ ಸಂಕ್ಷಿಪ್ತ ವರದಿ

ತುಮಕೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ವಿಭಾಗವು **ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು** ದಿನಾಂಕ 6ನೇ ಆಗಸ್ಟ್ 2018ರಂದು ವಿಶ್ವವಿದ್ಯಾನಿಲಯದ ಡಾ.ಪಿ.ಸದಾನಂದಮಯ್ಯ ಕಟ್ಟಡದಲ್ಲಿ ಆಯೋಜಿಸಲಾಗಿತ್ತು. ಪ್ರೊ. ಬಿ.ಕೆ. ಶಿವಣ್ಣ, ಕರ್ನಾಟಕ ಎನ್.ಎಸ್.ಎಸ್. ಭೀಷ್ಮ ಹಾಗೂ ನಿವೃತ್ತ ರಾಷ್ಟ್ರೀಯ ಸೇವಾ ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ ಇವರು ಈ ಕಾರ್ಯಾಗಾರದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಾ ನಮ್ಮ ರಾಷ್ಟ್ರ ಮುಂದುವರೆಯಬೇಕಾದರೆ ನಮ್ಮ ಯುವ ಜನಾಂಗ ಅದರಲ್ಲೂ ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಯನ್ನ ಅರಿತು ಬದುಕಿನೊಡನೆ ನೇರ ಸಂಪರ್ಕ ಇಟ್ಟುಕೊಳ್ಳಬೇಕಾಗಿದೆ. ರಾಷ್ಟ್ರೀಯ ಸೇವಾಯೋಜನೆಯು ವಿದ್ಯಾರ್ಥಿಗಳಲ್ಲಿರುವ ಅದಮ್ಯವಾದ ಬುದ್ಧಿ ಆದರ್ಶ ಉತ್ಸಾಹವನ್ನು ಬಳಸಿಕೊಂಡು ಕ್ರಿಯಾತ್ಮಕ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕಿದೆ ಎಂದರು. ರಾಷ್ಟ್ರೀಯ ಸೇವಾ ಯೋಜನೆ ನನ್ನನ್ನು ಪ್ರಬಲವಾಗಿ ಸೆಳೆಯಲ್ಪಟ್ಟ ಸೇವಾ ಕಾರ್ಯ ಹಾಗೆಯೇ, ನನ್ನ ಎರಡನೇ ಜೀವ, ನಮಗೆ ಸಂಸ್ಕಾರ ಬೆಳೆಯಬೇಕಾದರೆ ರಾಷ್ಟ್ರೀಯ ಸೇವಾ ಯೋಜನೆ ಬಹಳ ಪ್ರಮುಖವಾದ ಕಾರ್ಯ ನಿರ್ವಹಿಸುತ್ತದೆ. ರಾಷ್ಟೀಯ ಸೇವಾ ಯೋಜನೆಗೆ ಉದ್ಘಾಟನೆಯು ಮತ್ತು ಸಮಾರೋಪವೂ ಇಲ್ಲ ಇದು ನಿರಂತರವಾದ ಪ್ರಕ್ರಿಯೆ ಎನ್.ಸಿ.ಸಿ. ಶಿಸ್ತನ್ನು ಬೆಳೆಸಿದರೆ ಎನ್.ಎಸ್.ಎಸ್. ಬದ್ಧತೆಯನ್ನ ಬೆಳೆಸುತ್ತದೆ. ರಾಷ್ಟ್ರೀಯ ಸೇವಾ ಯೋಜನೆಗೆ ಪ್ರೊ. ದಿಲ್ಷಾದ್ ರವರು ನೀಡಿರುವ ಎನ್.ಎಸ್.ಎಸ್.ಗೀತೆ ನಮಗೆ ಸೇವೆ, ಕರ್ತವ್ಯ, ಸಭ್ಯತೆಯನ್ನ ನೀಡುವ ಸೇವಾ ಧೀಕ್ಷೆಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯ ಕರ್ನಾಟಕದಲ್ಲೇ ಪ್ರಪ್ರಥಮ ಬಾರಿಗೆ ರಾಷ್ಟ್ರೀಯ ಸೇವಾ ಯೋಜನೆಗೆ ಮಾರ್ಗಸೂಚಿಯನ್ನ ನೀಡಿದ್ದು ಹಲವು ಗ್ರಾಮೀಣ ಶಿಬಿರಗಳನ್ನು ಅಂತರ್‌ಕಾಲೇಜು, ವಲಯ, ರಾಜ್ಯ ಮಟ್ಟದ ಶಿಬಿರಗಳನ್ನು ಆಯೋಜಿಸಲು ಸ್ಫೂರ್ತಿಯ ಸೆಲೆಯಾಗಿ ನಿಲ್ಲುತ್ತದೆ,

ಆ ನಿಟ್ಟಿನಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ಪ್ರತಿಯೊಬ್ಬ ಎನ್.ಎಸ್.ಎಸ್. ಅಧಿಕಾರಿಗೂ ಅನ್ನ ನೀಡುವುದರ ಜೊತೆಗೆ ಜವಾಬ್ದಾರಿಯನ್ನು ನೀಡುತ್ತದೆ. ಹಾಗಾಗಿ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳು ತಮ್ಮನ್ನ ತಾವು ಉದ್ದೀಪನ ಗೊಳಿಸಿಕೊಂಡು ಎನ್.ಎಸ್.ಎಸ್. ಶಿಬಿರವನ್ನು ಬದ್ಧತೆಯಿಂದ ಮತ್ತು ಪರಸ್ಪರ ಒಬ್ಬರನ್ನೊಬ್ಬರು ಅರಿಯಲು, ವ್ಯಕ್ತಿತ್ವವಿಕಸನ, ವ್ಯಕ್ತಿಯ ಅಸ್ಮಿತೆ ಮುಂತಾದವುಗಳನ್ನ ಬೆಳೆಸುವಲ್ಲಿ ಕಾರ್ಯಪ್ರವೃತರಾಗಿರಬೇಕಾಗುತ್ತದೆ. ಅಷ್ಟೇ ಅಲ್ಲದೇ ಎನ್.ಎಸ್.ಬಗ್ಗೆ ಸ್ವಂತ ಆಸಕ್ತಿ ಉತ್ತಮ ಸಂಪರ್ಕ, ಪ್ರಾಂಶುಪಾಲರ ಸಹಕಾರ ಸ್ಥಳೀಯ ಜನರ ಜೊತೆ ಉತ್ತಮ ಬಾಂಧವ್ಯ, ಸಹೋದ್ಯೋಗಿಗಳ ಜೊತೆ ಉತ್ತಮ ಒಡನಾಟ ಈ ಎಲ್ಲ ಅಂಶಗಳು ಎನ್.ಎಸ್.ಎಸ್.ನ ಯಶಸ್ವಿಗೆ ಕಾರಿಣಿಬೂತ ಅಂಶಗಳಾಗಿವೆ. ರಾಷ್ಟ್ರೀಯ ಸೇವಾ ಯೋಜನೆಯಿಂದ ನಮ್ಮ ಉದ್ದಾರದ ಮುಖೇಣ ಸಮಾಜದ ಉದ್ಧಾರವಾಗಬೇಕಾಗಿದೆ, ಆದುದರಿಂದ ಅಧಿಕಾರಿಗಳು ನಿಷ್ಠೆಯಿಂದ ಪ್ರಾಮಾಣಿಕವಾಗಿ ವ್ಯವಸ್ಥಾಪನಾ ಸಾಮಾರ್ಥ್ಯವನ್ನ ವೃದ್ಧಿಸಿಕೊಂಡು ಪರಸ್ಪರ ನಂಬಿಕೆ, ಉತ್ಸಾಹ, ಪರಿಶ್ರಮ, ಛಲ ಮತ್ತು ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸುವ ಮನೋಭಾವನೆಯನ್ನ ಬೆಳೆಸಿಕೊಳ್ಳಬೇಕೇಂದು ತಿಳಿಸಿದರು.




**ಪ್ರೊ. ಬಿ.ಕೆ. ಶಿವಣ್ಣ, ಕರ್ನಾಟಕ ಎನ್.ಎಸ್.ಎಸ್. ಭೀಷ್ಮ ಹಾಗೂ ನಿವೃತ್ತ ರಾಷ್ಟ್ರೀಯ ಸೇವಾ ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ ಇವರು ತು.ವಿ.ವಿ.ಯ ಮಾನ್ಯ ಕುಲಪತಿಗಳಾದ ಪ್ರೊ.ವೈ.ಎಸ್.ಸಿದ್ಧೇಗೌಡರವರು ಪ್ರೊ. ಬಿ.ಕೆ. ಜಗದೀಶ್, ಡಾ. ಕಾಳ್‌ಚೆನ್ನೇಗೌಡ ಹಾಗೂ ಡಾ.ಲೋಕೇಶ ಎಂ.ಯು.ರವರೊಂದಿಗೆ ಕಾರ್ಯಾಗಾರದ ಉದ್ಘಾಟನೆಯನ್ನು ನೆರವೇರಿಸುತ್ತಿರುವುದು.**

ಈ ಕಾರ್ಯಾಗಾರದ ಅಧ್ಯಕ್ಷತೆಯನ್ನ ವಹಿಸಿದ್ದ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ವೈ.ಎಸ್.ಸಿದ್ಧೇಗೌಡರವರು ಮಾತನಾಡುತ್ತಾ ಇಂದಿನ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿರುವ ಕರ್ನಾಟಕ ರಾಷ್ಟ್ರೀಯ ಸೇವಾಯೋಜನೆಯ ಭೀಷ್ಮ ಪ್ರೊ.ಬಿ.ಕೆ. ಶಿವಣ್ಣ ಹಾಗೂ ಪ್ರೊ. ಬಿ.ಕೆ. ಜಗದೀಶ್ ಮತ್ತು ಡಾ.ಕಾಳ್‌ಚೆನ್ನೇಗೌಡರವರು ಎನ್.ಎಸ್.ಎಸ್.ಗೆ ನೀಡಿರುವ ಸೇವೆಯನ್ನು ಶ್ಲಾಘಿಸಿದರು. ಮುಂದುವರೆದು ಮಾತನಾಡುತ್ತಾ, ಪಠ್ಯಕ್ರಮದಷ್ಟೆ ಜಾಗತಿಕರಣ ಸಮಾಜದಲ್ಲಿ ಸಹಪಠ್ಯಕ್ರಮವು ಮುಖ್ಯವಾಗಿದ್ದು ವ್ಯಕ್ತಿಯ ದೈಹಿಕ, ಮಾನಸಿಕ, ನೈತಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕವಾಗಿ ಸರಿಯಾದ ದಿಕ್ಕಿನಲ್ಲಿ ವ್ಯಕ್ತಿತ್ವವನ್ನು ರೂಪಿಸುವ ಮಹತ್ವಪೂರ್ಣ ಯೋಜನೆಯೇ ರಾಷ್ಟ್ರೀಯ ಸೇವಾ ಯೋಜನೆ ಯಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯು ಸಮಾಜದ ಒಳಿತಿಗೆ ಮತ್ತು ನಮ್ಮ ವ್ಯಕ್ತಿತ್ವವನ್ನ ರೂಪಿಸುವಲ್ಲಿ ಜೀವನ ಕ್ರಮವೇ ಆಗಿದೆ. ಆದುದರಿಂದ ಕಾಲೇಜು ಎನ್.ಎಸ್.ಎಸ್. ಘಟಕಗಳ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಒಳಗೊಳ್ಳುವಂತೆ ಮಾಡುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಅಗತ್ಯವಾಗಿದೆ ಎಂದರು. ಹಾಗೂ ತುಮಕೂರು ವಿಶ್ವವಿದ್ಯಾನಿಲಯವು ರಾಷ್ಟ್ರೀಯ ಸೇವಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಿ ಗ್ರಾಮೀಣಾಭಿವೃದ್ಧಿಯ ಮೂಲಕ ದೇಶದ ಅಭಿವೃದ್ಧಿಯನ್ನ ಕಾಣುವಲ್ಲಿ ನಮ್ಮೆಲ್ಲರ ಜವಾಬ್ದಾರಿ ಅಗತ್ಯವಾಗಿದ್ದು ಆ ಮೂಲಕ ಕಾರ್ಯೋನ್ಮುಖವಾಗುವಂತೆ ಕಾರ್ಯಕ್ರಮಾಧಿಕಾರಿಗಳಿಗೆ ಕರೆ ನೀಡಿದರು.

ಈ ಕಾರ್ಯಾಗಾರದ ಮೊದಲನೆ ಗೋಷ್ಟಿಯ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಡಾ. ಕಾಳ್‌ಚೆನ್ನೇಗೌಡರವರು ರಾಷ್ಟ್ರೀಯ ಸೇವಾಯೋಜನೆಯ ದೈನಂದಿನ ಚಟುವಟಿಕೆಗಳ ಬಗ್ಗೆ ಹಾಗೂ ಎರಡನೇ ಗೋಷ್ಠಿಯಲ್ಲಿ ಪ್ರೊ. ಬಿ.ಕೆ. ಜಗದೀಶ್‌ರವರು ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರಗಳ ಕುರಿತು ಮಾತನಾಡಿದರು. ನಂತರ ಕಾರ್ಯಕ್ರಮಾಧಿಕಾರಿಗಳೊಂದಿಗೆ 2018–19ನೇ ಸಾಲಿನಲ್ಲಿ ಕೈಗೊಳ್ಳ ಬೇಕಾದ ಕಾರ್ಯಕ್ರಮಗಳ ಕುರಿತು ಮುಕ್ತವಾಗಿ ಚರ್ಚಿಸಿದರು.

ಈ ಕಾರ್ಯಕ್ರಮದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಕಲಾ ಮತ್ತು ವಿಜ್ಞಾನ ಘಟಕ ಕಾಲೇಜು ಹಾಗೂ ಸಂಯೋಜಿತ ಕಾಲೇಜುಗಳ ರಾ.ಸೇ.ಯೋ. ಕಾರ್ಯಕ್ರಮ ಅಧಿಕಾರಿಗಳು ಭಾಗವಹಿಸಿ ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಂಡರು.

ಡಾ.ಲೋಕೇಶ ಎಂ.ಯು ಕಾರ್ಯಕ್ರಮ ಸಂಯೋಜನಾಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನೆ ಇವರು ಈ ಕಾರ್ಯಾಗಾರದ ಪ್ರಮುಖ ಉದ್ದೇಶವನ್ನು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ತಿಳಿಸುವುದರೊಂದಿಗೆ ಕಾರ್ಯಾಗಾರಕ್ಕೆ ಆಗಮಿಸಿರುವ ಸರ್ವರನ್ನು ಸ್ವಾಗತಿಸಿದರು. ಹಾಗೂ ಡಾ.ಮೌನೇಶ್ ಶ್ರೀನಿವಾಸ್‌ರಾವ್ ರವರು ಕಾರ್ಯಕ್ರಮವನ್ನು ನಿರೂಪಿಸಿದರು.




**ಈ ಕಾರ್ಯಾಗಾರದ ಅಧ್ಯಕ್ಷತೆಯನ್ನ ವಹಿಸಿದ್ದ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ವೈ.ಎಸ್.ಸಿದ್ಧೇಗೌಡರವರು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಿರುವುದು.**